ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಜಿಎಲ್13/110/2022–23

ದಿನಾಂಕ 14–07–2026

## <u>ಸುತ್ತೋಲೆ</u>

ವಿಷಯ: **"ಸಂಸ್ಥಾಪನಾ ದಿನಾಚರಣೆ"** ಕಾರ್ಯಕ್ರಮವನ್ನು ಆಚರಿಸುವ ಬಗ್ಗೆ.
ಉಲ್ಲೇಖ: ಮಾನ್ಯ ಕುಲಪತಿಯವರ ಟಿಪ್ಪಣಿ ಸಂಖ್ಯೆ:ಕುಪ/ಇತರೆ/2026–27, ದಿನಾಂಕ 13.07.2026.

****

ಮೈಸೂರು ವಿಶ್ವವಿದ್ಯಾನಿಲಯದ **"ಸಂಸ್ಥಾಪನಾ ದಿನಾಚರಣೆ"** ಕಾರ್ಯಕ್ರಮವನ್ನು ದಿನಾಂಕ 27.07.2026ರಂದು ಬೆಳಗ್ಗೆ 11.00 ಗಂಟೆಗೆ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಈ ಸಮಾರಂಭದಲ್ಲಿ ಪ್ರೊ. (ಡಾ.) ಪರೀಕ್ಷಿತ್ ಸಿಂಗ್ ಮನ್ಹಾಸ್, ನಿರ್ದೇಶಕರು, ಶೈಕ್ಷಣಿಕ ಸಂವಹನ ಒಕ್ಕೂಟ, ನವದೆಹಲಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಂಸ್ಥಾಪನಾ ದಿನಾಚರಣೆಯ ವಿಶೇಷ ಉಪನ್ಯಾಸವನ್ನು ನೀಡುವರು ಮತ್ತು ಮಾನ್ಯ ಕುಲಪತಿಯವರಾದ ಪ್ರೊ. ಎನ್.ಕೆ. ಲೋಕನಾಥ್ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಾಪಕರು/ಅಧ್ಯಾಪಕೇತರ ಉದ್ಯೋಗಿಗಳು/ಅತಿಥಿ ಉಪನ್ಯಾಸಕರು/ಸಂಶೋಧಕರು/ವಿದ್ಯಾರ್ಥಿಗಳು ದಿನಾಂಕ 27.07.2026 ರಂದು ಬೆಳಗ್ಗೆ 10.30 ಗಂಟೆಯೊಳಗೆ ಕ್ರಾಫರ್ಡ್ ಭವನದಲ್ಲಿ ಹಾಜರಿರಲು ತಿಳಿಸಿದೆ.

ಇದು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವಾಗಿದ್ದು, ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಖಾಯಂ/ತಾತ್ಕಾಲಿಕ ಬೋಧಕರು, ಬೋಧಕೇತರರು, ಅತಿಥಿ ಉಪನ್ಯಾಸಕರು, ಸಂಶೋಧಕರು, ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿರುವುದು ಎಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ತಾವೆಲ್ಲರೂ **<u>ಕಡ್ಡಾಯವಾಗಿ</u>** ಭಾಗವಹಿಸಬೇಕಾಗಿ ತಿಳಿಸಿದೆ.

ಸದರಿ ಕಾರ್ಯಕ್ರಮಕ್ಕೆ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ, ಕಾರ್ಯಕ್ರಮ ಮುಗಿದ ನಂತರ ತಮ್ಮ ವಿಭಾಗ/ಕಛೇರಿ/ತರಗತಿಗಳಿಗೆ ಹಾಜರಾಗುವುದು.

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಗೆ,

1. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ ನಿರ್ದೇಶಕರು/ಸಂಯೋಜನಾಧಿಕಾರಿಗಳು ಮತ್ತು ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.

   } ಈ ವಿಷಯವನ್ನು ತಮ್ಮ ವಿಭಾಗದ ಎಲ್ಲಾ ಅಧ್ಯಾಪಕರು/ ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳು/ಅಧ್ಯಾಪಕೇತರ ಉದ್ಯೋಗಿಗಳು/ಸಂಶೋಧಕರುಗಳ ಗಮನಕ್ಕೆ ತರಬೇಕೆಂದು ತಿಳಿಸಿದೆ. ಎಲ್ಲಾ ಉದ್ಯೋಗಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ಸೂಕ್ತ ಕ್ರಮ ಕೈಗೊಂಡು ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸುವುದು.

5. ಸಂಯೋಜಕರು, ಐ.ಸಿ.ಡಿ. ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–ಇವರಿಗೆ ಸದರಿ ಸುತ್ತೋಲೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.
6. ಮಾನ್ಯ ಕುಲಪತಿಯವರ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈ.ವಿ.ವಿ, ಮೈಸೂರು.
7. ಕಛೇರಿ ಪ್ರತಿ.